# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

ಮುಕ್ತಗಂಗೋತ್ರಿ, ಮೈಸೂರು - ೫೭೦ ೦೦೬

ಸಂಖ್ಯೆ: ಕರಾಮುವಿ:ಡೀನ್(ಶೈ)/ಡಿಎಸಿ-7/ಸೂಕ್ಷ್ಮ ಜೀವಶಾಸ್ತ್ರ/2019-20

ಡೀನ್(ಶೈಕ್ಷಣಿಕ) ರವರ ಕಚೇರಿ,
ಕರಾಮುವಿ, ಮುಕ್ತಗಂಗೋತ್ರಿ,
ಮೈಸೂರು – 570006
ದಿನಾಂಕ: 16-01-2023

ಗೆ:

**Smt. Rekha H.S.**
ಸಂಶೋಧನಾ ವಿದ್ಯಾರ್ಥಿ
ಸೂಕ್ಷ್ಮ ಜೀವಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ,
ಕರಾಮುವಿ, ಮೈಸೂರು.

ವಿಷಯ: ಪಿಹೆಚ್.ಡಿ ಪದವಿಗೆ ಸೂಕ್ಷ್ಮ ಜೀವಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗದಲ್ಲಿ ಖಾಯಂ ನೋಂದಣಿ ಬಗ್ಗೆ.

ಉಲ್ಲೇಖ:1) 2018-19ನೇ ಸಾಲಿನ ಪಿಹೆಚ್.ಡಿ ಕಾರ್ಯಕ್ರಮದ ಪ್ರವೇಶಾತಿ ಅಧಿಸೂಚನೆ ಸಂಖ್ಯೆ:ಕರಾಮುವಿ/ಡೀನ್(ಶೈ)/ಡಿಎಸಿ-1/ಪಿಹೆಚ್.ಡಿ/2018-19, ದಿನಾಂಕ: 08-03-2019.
2) ತಾತ್ಕಾಲಿಕ ಪ್ರವೇಶಾತಿ ನೋಂದಣಿ ದಿನಾಂಕ: **28-02-2021.**
3) KSOU Ph.D Ordinance 2012 (IIIrd Amendment-2021)ರ ಅಧಿಸೂಚನೆ ದಿನಾಂಕ: **19-03-2022.**
4) ಪಿಹೆಚ್.ಡಿ. ಕೋರ್ಸ್‌ವರ್ಕ್ ಪರೀಕ್ಷಾ ಫಲಿತಾಂಶ ದಿನಾಂಕ: **18-05-2022.**
5) ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: **30-06-2022.**

*****

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಸೂಕ್ಷ್ಮ ಜೀವಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗದಲ್ಲಿ **"Evaluation of Microbial Fermentation Mixture for its Resistance Inducing Efficacy against Pearl Millet Downy Mildew Disease".** ವಿಷಯದಲ್ಲಿ ಪಿಹೆಚ್.ಡಿ. ಕಾರ್ಯಕ್ರಮಕ್ಕೆ ದಿನಾಂಕ: 28-02-2021 ರಿಂದ ಜಾರಿಗೆ ಬಂದಂತೆ ತಾತ್ಕಾಲಿಕ ನೋಂದಣಿ ಮಾಡಲಾಗಿದ್ದು, (ತಾತ್ಕಾಲಿಕ ನೋಂದಣಿ ಸಂಖ್ಯೆ: 193102) ಕೋರ್ಸ್‌ವರ್ಕ್ ಪರೀಕ್ಷೆಯಲ್ಲಿ ಅರ್ಹತೆ ಹೊಂದಿರುವುದರಿಂದ ತಮ್ಮನ್ನು ದಿನಾಂಕ: 12-07-2022 ರಿಂದ ಜಾರಿಗೆ ಬಂದಂತೆ ಖಾಯಂ ನೋಂದಣಿ ಮಾಡಲಾಗಿದೆ.

- ಸಂಶೋಧಕರ ಹೆಸರು : **Smt. Rekha H.S.**
- ಮಹಾಪ್ರಬಂಧದ ಶೀರ್ಷಿಕೆ : **"Evaluation of Microbial Fermentation Mixture for its Resistance Inducing Efficacy against Pearl Millet Downy Mildew Disease".**
- ಮಾರ್ಗದರ್ಶಕರ ಹೆಸರು : **Dr. Niranjan Raj .S**
- ಖಾಯಂ ನೋಂದಣಿ ಸಂಖ್ಯೆ : **193102**

1. ಸಂಶೋಧನಾರ್ಥಿಗಳು ಕರಾಮುವಿ ಪಿಹೆಚ್.ಡಿ. ಆಧ್ಯಾದೇಶ 2012 (3ನೇ ತಿದ್ದುಪಡಿ 2021) ರ ಪರಿಚ್ಛೇದ 23ರ ಪ್ರಕಾರ ತಾತ್ಕಾಲಿಕ ನೋಂದಣಿಯಾದ ದಿನಾಂಕದಿಂದ ಕನಿಷ್ಠ 03 ವರ್ಷಗಳಿಂದ ಗರಿಷ್ಠ 06 ವರ್ಷಗಳ ಒಳಗೆ ಸಂಶೋಧನೆ ಪೂರ್ಣಗೊಳಿಸಬೇಕಾಗಿರುತ್ತದೆ.
2. ಮಹಿಳಾ ಸಂಶೋಧನಾರ್ಥಿಗಳು ವಿಕಲಚೇತನರಾಗಿದ್ದ ಸಂದರ್ಭದಲ್ಲಿ (ಶೇಕಡ.40 ರಷ್ಟು ವಿಕಲಚೇತನರಾಗಿರುವವರು) ಅಂತಹ ಸಂಶೋಧನಾರ್ಥಿಗಳಿಗೆ ಅನಾರೋಗ್ಯದ ಕಾರಣವಿದ್ದಲ್ಲಿ ಅಂತಹ ಸಂದರ್ಭದಲ್ಲಿ ಆ ಸಂಶೋಧನಾರ್ಥಿಗೆ ಗರಿಷ್ಠ ಹೆಚ್ಚುವರಿ ವರ್ಷಗಳ ಅವಧಿಯ ಒಳಗೆ ಸಂಶೋಧನೆಯನ್ನು ಪೂರ್ಣಗೊಳಿಸಬೇಕಾಗಿರುತ್ತದೆ.
3. ಒಂದು ವೇಳೆ ಸಂಶೋಧನೆಗೆ ವಿಶ್ವವಿದ್ಯಾನಿಲಯವು ನಿಗದಿಪಡಿಸಿದ ಗರಿಷ್ಠ ಕಾಲಾವಧಿಯು ಮುಗಿದ ಬಳಿಕವೂ ಪೂರ್ಣಗೊಳಿಸಲು ಸಾಧ್ಯವಾಗದಿದ್ದಲ್ಲಿ, ಸಂಶೋಧನೆಯ ಅವಧಿಯ ವಿಸ್ತರಣೆಗಾಗಿ ನಿಗದಿತ ಅವಧಿಯ ಮೊದಲು ಸಂಶೋಧನಾರ್ಥಿಯು ಅರ್ಜಿ ಸಲ್ಲಿಸಿ, ಮಾರ್ಗದರ್ಶಕರ ಮತ್ತು ಸಂಶೋಧನಾ ಸಲಹಾ ಸಮಿತಿಯ ಸೂಕ್ತ ಶಿಫಾರಸ್ಸುಗಳೊಂದಿಗೆ, ನಿಗದಿತ ಶುಲ್ಕವನ್ನು ಪಾವತಿಸಿ ಒಂದು ವರ್ಷದವರೆಗೆ ಅವಧಿ ವಿಸ್ತರಿಕೊಳ್ಳುವ ಅವಕಾಶವಿರುತ್ತದೆ.
4. ಸಂಶೋಧನಾರ್ಥಿಯು ಅರ್ಧ ವಾರ್ಷಿಕ ಪ್ರಗತಿಯ ವರದಿಗಳನ್ನು ತಪ್ಪದೇ ಮಾರ್ಗದರ್ಶಕರ ಮೂಲಕ ಸ್ನಾತಕೋತ್ತರ ಅಧ್ಯಯನ ವಿಭಾಗದ ಮುಖ್ಯಸ್ಥರಿಗೆ ಸಲ್ಲಿಸಬೇಕು. ವರದಿಯನ್ನು ಸಂಶೋಧನಾ ಸಲಹಾ ಸಮಿತಿಯ ಮುಂದೆ ಮಂಡಿಸುವುದು. ಸಂಶೋಧನಾರ್ಥಿಯು ಅರ್ಧವಾರ್ಷಿಕ ವರದಿಯ ಶುಲ್ಕ ರೂ.4,000/-ಗಳನ್ನು ವಿಶ್ವವಿದ್ಯಾನಿಲಯಕ್ಕೆ Online ಮುಖಾಂತರ ಜಮಾ ಮಾಡಬೇಕು. ಸಂಶೋಧನಾರ್ಥಿಯ ಎರಡು ಬಾರಿ ಅರ್ಧ ವಾರ್ಷಿಕ ಸಂಶೋಧನಾ ವರದಿಯನ್ನು ನಿಗದಿತ ಅವಧಿಯಲ್ಲಿ ಸತತವಾಗಿ ಸಲ್ಲಿಸಲಾಗದಿದ್ದಲ್ಲಿ ಅಥವಾ ಸಂಶೋಧನಾರ್ಥಿಯ ಸಂಶೋಧನಾ ಪ್ರಗತಿಯು ಎರಡು ಅರ್ಧವಾರ್ಷಿಕ ಅವಧಿಗೆ ತೃಪ್ತಿಕರವಾಗಿಲ್ಲವೆಂದರೆ ಸಂಬಂಧಪಟ್ಟ ಮಾರ್ಗದರ್ಶಕರೊಂದಿಗಿನ ಸಮಾಲೋಚನೆಯ ನಂತರ ಸಂಶೋಧನಾ ಸಲಹಾ ಸಮಿತಿಯ ಸಂಶೋಧನಾರ್ಥಿಯ ನೋಂದಣಿಯ ರದ್ದತಿಗೆ ಶಿಫಾರಸ್ಸು ಮಾಡಬಹುದು. ಸಂಶೋಧನಾ ಸಲಹಾ ಸಮಿತಿಯ ಶಿಫಾರಸ್ಸಿನ ಅನ್ವಯ ಸಂಶೋಧನಾರ್ಥಿಯ ನೋಂದಣಿ ರದ್ದತಿಯ ಮೊದಲು ಅವರಿಗೆ ಕಾರಣ ಕೇಳಿ ಸೂಚಿಯನ್ನು ನೀಡಲಾಗುವುದು.
5. ಸಂಶೋಧನಾರ್ಥಿಯ ಕನಿಷ್ಠ 06 ಪ್ರಗತಿ ವರದಿಗಳನ್ನು ಸಲ್ಲಿಸಬೇಕು.
6. ಯಾವುದಾದರೂ ಎರಡು UGC care / peer reviewed ಜನರಲ್‌ಗಳಲ್ಲಿ ಮೊದಲ ಲೇಖಕರಾಗಿ ಸಂಶೋಧನಾ ಲೇಖನ ಪ್ರಕಟಿಸಬೇಕು ಹಾಗೂ ಎರಡು ರಾಷ್ಟ್ರೀಯ ಸಮ್ಮೇಳನದಲ್ಲಿ ಪ್ರಥಮ ಲೇಖಕರಾಗಿ ಪತ್ರಿಕೆ ಮಂಡಿಸಿರಬೇಕು.

ಮುಂದುವರೆದಿದೆ..2

7. ಮಹಾಪ್ರಬಂಧದ ಸಲ್ಲಿಕೆಯ ಕನಿಷ್ಠ ಮತ್ತು ಗರಿಷ್ಠ ಅವಧಿಯ ಅನ್ವಯ, ಮಹಾಪ್ರಬಂಧದ ಸಲ್ಲಿಕೆಯ ಆರು ತಿಂಗಳ ಪೂರ್ವಭಾವಿ ಅವಧಿಯಲ್ಲಿ ಸಂಶೋಧಕರು ಮಹಾಪ್ರಬಂಧದ 15 ಅಂತಿಮ ಸಾರಲೇಖದ ಪ್ರತಿಗಳನ್ನು ಸಂಶೋಧನಾ ಮಾರ್ಗದರ್ಶಕರ ಮೂಲಕವಾಗಿ ಸ್ನಾತಕೋತ್ತರ ಅಧ್ಯಯನ ವಿಭಾಗದ ಅಧ್ಯಕ್ಷರಿಗೆ, ಮಹಾಪ್ರಬಂಧದ ಸಲ್ಲಿಕೆಯ ಸಂಭವನೀಯ ದಿನಾಂಕಗಳನ್ನು ಸೂಚಿಸಿ ಅರ್ಜಿ ಸಲ್ಲಿಸಬೇಕು.
8. ಜೊತೆಗೆ ವಿಶ್ವವಿದ್ಯಾನಿಲಯದ ನಿರ್ದಿಷ್ಟವಾದ ನಮೂನೆಯ ಅರ್ಜಿಯನ್ನು ತುಂಬಿ ಸಂಶೋಧಕರು ನಿಗದಿತ ಶುಲ್ಕಗಳನ್ನು ಪಾವತಿಸಿರುವ ದಾಖಲೆಗಳ ಜೊತೆಗೆ ಸ್ನಾತಕೋತ್ತರ ವಿಭಾಗದ ಅಧ್ಯಕ್ಷರ / ಸಂಬಂಧಪಟ್ಟ ಸಂಸ್ಥೆಗಳ ಮುಖ್ಯಸ್ಥರು / ವಿಶ್ವವಿದ್ಯಾನಿಲಯದ ಗ್ರಂಥಪಾಲಕರ ಮತ್ತು ಹಾಸ್ಟೆಲ್ ವಾರ್ಡನ್‌ಗಳಿಂದ ದೃಢೀಕರಿಸಿಕೊಂಡು ಬೇಬಾಕಿ ಪತ್ರವನ್ನು ಸಲ್ಲಿಸಬೇಕು.
9. ಮಹಾಪ್ರಬಂಧದ ಸಲ್ಲಿಕೆಯ ಪೂರ್ವದಲ್ಲಿ ಮೂರು ತಿಂಗಳ ಮುಂಚಿತವಾಗಿ ಸಂಶೋಧನಾರ್ಥಿಯು ಮಹಾಪ್ರಬಂಧದ ಸಲ್ಲಿಕೆಗೆ ಸಂಬಂಧಿಸಿದಂತೆ ಸಂಶೋಧನಾ ಸಲಹಾ ಸಮಿತಿಯ ಪೂರ್ವಭಾವಿ ಕೊಲೊಕ್ವಿಯಂನಲ್ಲಿ ಸಂಶೋಧಕರ ಯು.ಜಿ.ಸಿ ನಿಯಮದ ಅನ್ವಯ ಎರಡು ಸಂಶೋಧನಾ ಲೇಖನವನ್ನು ಪ್ರಕಟಿಸಿರುವ ಪ್ರಕಟಣೆಯ ಎಲ್ಲಾ ತಾಂತ್ರಿಕ ಅಂಶಗಳನ್ನು ಪರಿಶೀಲಿಸಬೇಕು. (ಸಂಶೋಧನಾ ಲೇಖನದ ಪ್ರಕಟಣೆಯ ನಿಯತಕಾಲಿಕಗಳು, ಲೇಖನಗಳು, ಮುದ್ರಣ/ಮರು ಮುದ್ರಣ/ಗ್ಯಾಲರಿ ಪುರಾವೆ/ಸಂಶೋಧನಾ ಪತ್ರಿಕೆಗಳ ತಾಂತ್ರಿಕ ಮೊದಲ ಪುಟಗಳ ಮಾಹಿತಿ, ಸಂಶೋಧನಾ ಲೇಖನಗಳ ಗುಣಮಟ್ಟ ಇತ್ಯಾದಿ.)
10. ಸಂಶೋಧನಾ ಸಲಹಾ ಸಮಿತಿಯು ಮಹಾಪ್ರಬಂಧ ಸಲ್ಲಿಕೆಯ ಪೂರ್ವಭಾವಿ ಕೊಲೊಕ್ವಿಯಂನಲ್ಲಿ ಅಂತಿಮ ಸಾರಲೇಖದಲ್ಲಿ ನಮೂದಿಸಿರುವ ಸಂಶೋಧನಾ ವಿವರಗಳ ಸಂಪೂರ್ಣ ಚೌಕಟ್ಟು, ವಿನ್ಯಾಸ, ತಾಂತ್ರಿಕ ಅಂಶಗಳನ್ನು ಪರಿಶೀಲಿಸಬೇಕು.
11. ಸಂಶೋಧನಾ ಸಲಹಾ ಸಮಿತಿಗೆ ಸಂಶೋಧನಾರ್ಥಿಯ ಸಂಶೋಧನಾ ವಿದ್ಯಾರ್ಥಿಯು ಸಲ್ಲಿಸಿದ ಅಂತಿಮ ಸಾರಲೇಖವು ತಾಂತ್ರಿಕವಾಗಿ ಸರಿಯಾಗಿದೆ, ಸಮಗ್ರವಾಗಿದೆ ಎಂದು ಮನವರಿಕೆಯಾದ ಪಕ್ಷದಲ್ಲಿ ಮಹಾಪ್ರಬಂಧವನ್ನು ಅಂತಿಮ ಸಲ್ಲಿಕೆಗೆ ಶಿಫಾರಸ್ಸು ಮಾಡಬೇಕು.
12. ಸಂಶೋಧನೆಯ ತಾಂತ್ರಿಕ ಅಂಶಗಳು ಸಮಗ್ರವಾಗಿಲ್ಲದ ಸಂದರ್ಭಗಳಲ್ಲಿ ಅಥವಾ ಸಂಶೋಧನೆಯು ತೃಪ್ತಿಕರವಾಗಿರದ ಪಕ್ಷದಲ್ಲಿ ಸಂಶೋಧನಾರ್ಥಿಯು ಮೂರು ತಿಂಗಳ ಅವಧಿಯ ಒಳಗೆ ಮತ್ತೊಂದು ಪೂರ್ವಭಾವಿ ಕೊಲೊಕ್ವಿಯಂ ಹಾಜರಾಗಲು ಅವಕಾಶವನ್ನು ಕಲ್ಪಿಸಬೇಕು.
13. ಕೃತಿಚೌರ್ಯವನ್ನು ಪರಿಶೀಲಿಸಲು ಪ್ರತಿಯೊಬ್ಬ ಸಂಶೋಧಕರು ಮಹಾಪ್ರಬಂಧದ ಒಂದು ಹಾರ್ಡ್‌ಕಾಪಿ ಮತ್ತು ಸಾಫ್ಟ್ ಕಾಪಿಯನ್ನು ಆಯಾ ವಿಭಾಗಕ್ಕೆ ಸಲ್ಲಿಸುವುದು.
14. ಮಹಾಪ್ರಬಂಧದ ಪರೀಕ್ಷೆಯ ಸಲ್ಲಿಕೆಯ ಶುಲ್ಕ ರೂ.7,000/-ಆಗಿದ್ದು, ವಿಶ್ವವಿದ್ಯಾನಿಲಯಕ್ಕೆ ಒಂದೇ ಕಂತಿನಲ್ಲಿ ಈ ಶುಲ್ಕವನ್ನು ಸಂಶೋಧನಾರ್ಥಿ ಮಹಾಪ್ರಬಂಧದ ಸಲ್ಲಿಕೆಯ ಸಮಯದಲ್ಲಿ ಪಾವತಿಸಬೇಕಾಗಿರುತ್ತದೆ.
15. ವಿಶ್ವವಿದ್ಯಾನಿಲಯದಿಂದ ಮಹಾಪ್ರಬಂಧ ಸಲ್ಲಿಕೆಗೆ ಅನುಮತಿಯನ್ನು ಪಡೆದ ನಂತರ ಪ್ರತಿ ಸಂಶೋಧನಾರ್ಥಿಯು ಮಹಾ ಪ್ರಬಂಧದ ನಾಲ್ಕು ಪ್ರತಿಗಳನ್ನು ಮಾರ್ಗದರ್ಶಕರಿಗೆ ಸಲ್ಲಿಸಬೇಕು. (ಸಂಶೋಧನಾ ಸಲಹಾ ಸಮಿತಿಯಿಂದ ಅನುಮತಿ ಪಡೆದ ಆರು ತಿಂಗಳ ಒಳಗೆ) ಮಾರ್ಗದರ್ಶಕರು ಸಂಬಂಧಪಟ್ಟ ಸ್ನಾತಕೋತ್ತರ ವಿಭಾಗದ ಅಧ್ಯಕ್ಷರ ಮೂಲಕ ಕುಲಸಚಿವರು (ಪರೀಕ್ಷಾಂಗ) ಅವರಿಗೆ ಮಹಾಪ್ರಬಂಧದ ಮೌಲ್ಯಮಾಪನಕ್ಕಾಗಿ ಸಲ್ಲಿಸಬೇಕು.
16. ಸಂಶೋಧನಾ ಮಹಾಪ್ರಬಂಧದ ಬಗ್ಗೆ ಬಾಹ್ಯ ಹಾಗೂ ಆಂತರಿಕ ಪರೀಕ್ಷಕರಿಂದ ತೃಪ್ತಿಕರ ಬರದಿ ಬಂದ ನಂತರ ಮುಕ್ತ Viva-voce ನಡೆಸಲಾಗುವುದು. ಸಂಶೋಧನಾರ್ಥಿಯು Viva-voceಗೆ ಹಾಜರಾಗಿ ತಮ್ಮ ಮಹಾಪ್ರಂಧದ ಸಾರವನ್ನು ಮುಖ್ಯಸ್ಥರು, ಪರೀಕ್ಷಕರು ಹಾಗೂ ಸಾರ್ವಜನಿಕರ ಮುಂದೆ ಮಂಡಿಸಬೇಕು ಹಾಗೂ ಅವರು ಕೇಳುವ ಪ್ರಶ್ನೆಗಳಿಗೆ ಸಮರ್ಪಕವಾಗಿ ಉತ್ತರಿಸಬೇಕು.
17. Open Viva-voce ಯ ನಂತರ ತಾತ್ಕಾಲಿಕ ಅಧಿಸೂಚನೆ ಹೊರಡಿಸಲಾಗುವುದು. ಸಂಶೋಧನಾರ್ಥಿಗಳು ಮುಂದಿನ ಘಟಿಕೋತ್ಸವದಂದು ಪಿಹೆಚ್.ಡಿ. ಪದವಿ ಪ್ರಮಾಣ ಪತ್ರಕ್ಕೆ ಅರ್ಜಿ ಸಲ್ಲಿಸಿ, ಪದವಿ ಪ್ರಮಾಣ ಪತ್ರವನ್ನು ಸ್ವೀಕರಿಸಬಹುದಾಗಿದೆ.
18. ಪಿಹೆಚ್.ಡಿ. ಪದವಿಗೆ ನೋಂದಣಿಯಾದ ಸಂಶೋಧನಾರ್ಥಿಯು ಸಂಶೋಧನೆಯ ಅವಧಿಯಲ್ಲಿ ಮತ್ತೊಂದು ಪದವಿಯನ್ನು ವಿಶ್ವವಿದ್ಯಾನಿಲಯದಲ್ಲಿ ಅಥವಾ ಹೊರಗೆ ಮಾಡುವುದು ಸಾಬೀತಾದರೆ ಅವರ ಸಂಶೋಧನಾ ನೋಂದಣಿಯನ್ನು ಸಂಪೂರ್ಣವಾಗಿ ರದ್ದುಪಡಿಸಲಾಗುವುದು.

17-01-23
ಡೀನ್ (ಶೈಕ್ಷಣಿಕ)

ಗೆ:

1. ಸಂಬಂಧಪಟ್ಟ ಸಂಶೋಧನಾ ವಿದ್ಯಾರ್ಥಿರವರಿಗೆ.
2. ಸಂಬಂಧಪಟ್ಟ ಮಾರ್ಗದರ್ಶಕರು, ಕರಾಮುವಿ. ಮೈಸೂರು. (ಪ್ರತಿಗಳನ್ನು ತಮ್ಮ ವಿಭಾಗದಿಂದ ಸಂಬಂಧಪಟ್ಟವರಿಗೆ ನೀಡುವುದು)

<u>ಪ್ರತಿಯನ್ನು:</u>

3. ಅಧ್ಯಕ್ಷರು,. ಸೂಕ್ಷ್ಮ ಜೀವಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಕರಾಮುವಿ ಮೈಸೂರು.
4. ಅಧ್ಯಕ್ಷರು, ಸೂಕ್ಷ್ಮ ಜೀವಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ಸ್ನಾತಕೋತ್ತರ ಅಧ್ಯಯನ ಮಂಡಳಿ, ಕರಾಮುವಿ ಮೈಸೂರು.
5. ಮಾನ್ಯ ಕುಲಪತಿಗಳ ಆಪ್ತ ಸಹಾಯಕರು, ಕುಲಪತಿಗಳ ಕಾರ್ಯಾಲಯ, ಕರಾಮುವಿ, ಮೈಸೂರು.
6. ಕುಲಸಚಿವರ ಆಪ್ತ ಸಹಾಯಕರು, ಕರಾಮುವಿ, ಮೈಸೂರು.
7. ಕುಲಸಚಿವರು (ಪರೀಕ್ಷಾಂಗ), ಕರಾಮುವಿ, ಮೈಸೂರು.
8. ಹಣಕಾಸು ಅಧಿಕಾರಿಗಳು, ಕರಾಮುವಿ, ಮೈಸೂರು.
9. ವಿಶೇಷಾಧಿಕಾರಿಗಳು, ಪಿಹೆಚ್.ಡಿ, ಡೀನ್(ಶೈಕ್ಷಣಿಕ) ವಿಭಾಗ, ಕರಾಮುವಿ, ಮೈಸೂರು.
10. ಎಲ್ಲಾ ಸ್ಕೂಲ್ ನಿರ್ದೇಶಕರು, ಕರಾಮುವಿ, ಮೈಸೂರು.
11. ನಿರ್ದೇಶಕರು, ಪಿ.ಎಂ.ಇ.ಬಿ ಘಟಕ, ಕರಾಮುವಿ, ಮೈಸೂರು.
12. ಕಚೇರಿ ಪ್ರತಿ.